**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ವೈ.ಎಂ.ಸತೀಶ್ ಇವರು ಶೂನ್ಯ ವೇಳೆಯಲ್ಲಿ ನೀಡಿರುವ ಸೂಚನೆಗೆ ಉತ್ತರ.**

**ಪ್ರಶ್ನೆ:**

ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕು ಮತ್ತು ಇತರೆ ತಾಲ್ಲೂಕುಗಳಲ್ಲಿ ರಾಜ್ಯ ಸರ್ಕಾರದ ಅನೇಕ ನಿರ್ಮಾಣ ಕಾಮಗಾರಿಗಳು ಪೂರ್ಣಗೊಳ್ಳದೆ ಅರ್ದಕ್ಕೆ ನಿಂತಿರುತ್ತದೆ. ಇದರಲ್ಲಿ ಸುಮಾರು ಸಂಡೂರು ತಾಲ್ಲೂಕಿನ ತಾಳೂರು ಶಿಕ್ಷಕರ ವಸತಿ ಗೃಹದ ನಿರ್ಮಾಣ ಕಾಮಗಾರಿ 2008-09 ರಲ್ಲಿ ಆರಂಭವಾಗಿದ್ದು ಹಾಗೂ ಚೋಮ್ಮಘಟ್ಟ ಶಿಕ್ಷಕರ ವಸತಿ ಗೃಹ ನಿರ್ಮಾಣವು 2011-12 ರಲ್ಲಿ ಪ್ರಾರಂಭವಾಗಿದ್ದರು ಸಹ ಇಲ್ಲಿಯಾವರೆಗೂ ಕಾಮಗಾರಿ ಮುಗಿದಿರುವುದಿಲ್ಲ. ಇದನ್ನು ನಿರ್ಮಿತಿ ಕೇಂದ್ರದವರು ನಿರ್ಮಾಣ ಮಾಡುತ್ತಿದ್ದು, ಉಳಿಕೆ ಅನುದಾನದ ಅವಶ್ಯಕತೆ ಮತ್ತು ನಿರ್ಮಿತಿ ಕೇಂದ್ರದವರ ಕಾಲವಿಳಂಬದಿಂದ ಈಗಾಗಲೇ ಕಟ್ಟಿರುವ ಅರ್ಧ ಕಟ್ಟಡವು ಸಹ ಶಿಥಿಲವಾಗಿದೆ. ಈ ಶಿಕ್ಷಕರ ವಸತಿ ಗೃಹಗಳಿಗೆ ತುರ್ತಾಗಿ ಸರಕಾರದಿಂದ ಅನುದಾನ ಬಿಡುಗಡೆಗೊಳಿಸಿ, ಈ ವಸತಿ ಗೃಹಗಳ ನಿರ್ಮಾಣವನ್ನು ಪೂರ್ಣಗೊಳಿಸುವ ಕುರಿತು .

**ಉತ್ತರ :**

2007-08 ರಿಂದ 2011-12ನೇ ಸಾಲಿನ ಶಿಕ್ಷಕರ ವಸತಿ ಸಂಕೀರ್ಣದ ಕಟ್ಟಡ ಕಾಮಗಾರಿಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ನಿಗಮಕ್ಕೆ ವಹಿಸಿದ್ದು, ನಿಗಮವು ಸದರಿ ಕಟ್ಟಡ ಕಾಮಗಾರಿಗಳನ್ನು ನಿರ್ಮಿತಿ ಕೇಂದ್ರಗಳ ಮುಖಾಂತರ ನಿರ್ವಹಿಸಲಾಗುತ್ತಿದೆ.

ಸದರಿ ಯೋಜನೆಯಡಿ ನಿಗಮಕ್ಕೆ ವಹಿಸಿರುವ 213 ಕಟ್ಟಡಗಳ ಪೈಕಿ 44 ಕಟ್ಟಡಗಳಿಗೆ ಸಂಬಂಧಿಸಿದ ನಿವೇಶನ ಸಮಸ್ಯೆಯಿಂದ ಕೈಬಿಡಲಾಗಿದ್ದು ಅವುಗಳನ್ನು ಇಲಾಖೆಗೆ ಹಿಂದಿರುಗಿಸಲಾಗಿರುತ್ತದೆ. ಬಾಕಿ ಉಳಿದ 169 ಕಟ್ಟಡಗಳ ಪೈಕಿ 145 ಶಾಲಾ ಶಿಕ್ಷಕರ ವಸತಿ ಗೃಹಗಳನ್ನು ಪೂರ್ಣಗೊಳಿಸಿ ಇಲಾಖೆಗೆ ಹಸ್ತಾಂತರಿಸಲಾಗಿರುತ್ತದೆ. ಬಾಕಿ ಉಳಿದ 24 ಕಟ್ಟಡಗಳ ಕಾಮಗಾರಿಯು ವಿವಿಧ ಹಂತದಲ್ಲಿದ್ದು ಯಾವುದೇ ಅನುದಾನ ಬಿಡುಗಡೆಗೊಳ್ಳದ ಕಾರಣ ಅನುದಾನದ ಕೊರತೆಯಿಂದಾಗಿ ಸ್ಥಗಿತಗೊಂಡಿರುತ್ತವೆ. ಕಾರಣ ಸದರಿ ಯೋಜನೆಯಡಿ ಶಾಲಾ ಶಿಕ್ಷಕರ ವಸತಿ ಗೃಹಗಳ ಕಾಮಗಾರಿಗಾಗಿ ನಿವೇಶನಗಳನ್ನು ವಿಳಂಬವಾಗಿ ಹಸ್ತಾಂತರಿಸಿರುವುದರಿಂದ ಹಾಗೂ ಕಾಮಗಾರಿಗಳನ್ನು ಕೈಗೆತ್ತಿಕೊಂಡ ನಂತರ ಕಟ್ಟಡ ಸಾಮಗ್ರಿಗಳ ದರಗಳು ದಿನದಿಂದ ದಿನಕ್ಕೆ ಹೆಚ್ಚಾಗಿರುವುದರಿಂದ ಸದರಿ ಕಟ್ಟಡ ಕಾಮಗಾರಿಗಳನ್ನು ಪೂರ್ಣಗೊಳಿಸುವುದು ಕಷ್ಟಕರವಾಗಿರುವುದರಿಂದ ಉಳಿದ 24 ಕಟ್ಟಡಗಳ ಪೈಕಿ 23 ಕಟ್ಟಡಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲು ಹೆಚ್ಚುವರಿಯಾಗಿ ರೂ.428.79 ಲಕ್ಷಗಳ ಅನುದಾನ ಅವಶ್ಯಕವಿರುತ್ತದೆ ಎಂದು ಆಯಾ ಜಿಲ್ಲಾ ನಿರ್ಮಿತಿ ಕೇಂದ್ರಗಳ ಯೋಜನಾ ನಿರ್ದೇಶಕರು/ಯೋಜನಾ ವ್ಯವಸ್ಥಾಪಕರುಗಳು ನಿಗಮಕ್ಕೆ ಕೋರಿರುವ ಹಿನ್ನೆಲೆಯಲ್ಲಿ ಬಾಕಿ ಉಳಿದ 23 ಶಾಲಾ ಶಿಕ್ಷಕರ ವಸತಿ ಗೃಹಗಳನ್ನು ಪೂರ್ಣಗೊಳಿಸಲು ಅವಶ್ಯಕವಿರುವ ಹೆಚ್ಚುವರಿ ಅನುದಾನ ರೂ.428.79 ಲಕ್ಷಗಳನ್ನು ಅನುಮೋದಿಸಿ 01 ತಿಂಗಳೊಳಗಾಗಿ ಅನುದಾನ ಬಿಡುಗಡೆ ಮಾಡುವಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಕೋರಲಾಗಿದೆ. ಆದರೆ, ಈವರೆಗೂ ಸದರಿ ಇಲಾಖೆಯಿಂದ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಬೊಮ್ಮಘಟ್ಟ ಪ್ರದೇಶದಲ್ಲಿನ ಕಟ್ಟಡ ಕಾಮಗಾರಿಗಳನ್ನು ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್, ಬಳ್ಳಾರಿ ವತಿಯಿಂದ ಅನುದಾನವನ್ನು ಬಳಸಿಕೊಂಡು ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರು ಜಿಲ್ಲಾಧಿಕಾರಿಗಳು, ಬಳ್ಳಾರಿ ರವರಿಗೆ ಕೋರಲಾಗಿತ್ತು. ಆದರೂ ಸಹ ಕಟ್ಟಡ ಕಾಮಗಾರಿಗಳಿಗೆ ಈವರೆಗೆ ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್, ಬಳ್ಳಾರಿ ವತಿಯಿಂದ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಮುಂದುವರೆದು, ಆಯಾ ಜಿಲ್ಲಾ ನಿರ್ಮಿತಿ ಕೇಂದ್ರಗಳ ಯೋಜನಾ ನಿರ್ದೇಶಕರು/ವ್ಯವಸ್ಥಾಪಕರುಗಳು ಈ ಹಿಂದೆ 23 ಕಟ್ಟಡಗಳನ್ನು ಪೂರ್ಣಗೊಳಿಸಲು ಕೋರಲಾಗಿದ್ದ ಹೆಚ್ಚುವರಿ ಅನುದಾನ ರೂ.428.79 ಲಕ್ಷಗಳ (ತಾಳೂರು ಒಳಗೊಂಡಂತೆ) ಜೊತೆಗೆ ಬೊಮ್ಮಘಟ್ಟ ಪ್ರದೇಶದ ಯೋಜನಾ ವೆಚ್ಚ ರೂ.42.82 ಲಕ್ಷಗಳು ಒಟ್ಟು ರೂ.471.61 ಲಕ್ಷಗಳನ್ನು ಅನುಮೋದಿಸಿ ಡಿಸೆಂಬರ್ 2023 ರ ಅಂತ್ಯದೊಳಗೆ ಬಿಡುಗಡೆ ಮಾಡಿದ್ದಲ್ಲಿ, ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಹಸ್ತಾಂತರಿಸಲು ಕ್ರಮವಹಿಸಲಾಗುವುದೆಂದು ದಿನಾಂಕ:15.11.2023 ರಂದು ಪತ್ರ ಮೂಲಕ ಕೋರಲಾಗಿದೆ.

(ಸಂಖ್ಯೆ : ವಇ 398 ಹೆಚ್‌ಎಎಂ 2023)

(ಬಿ.ಜೆಡ್.ಜಮೀರ್ ಅಹ್ಮದ್ ಖಾನ್)
ವಸತಿ,ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು